# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 552

ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 12.12.2024

ಉತ್ತರಿಸುವ ಸಚಿವರು : ಗೃಹ ಸಚಿವರು

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು-ಮೈಸೂರು ನಡುವಿನ ರಾಷ್ಟ್ರೀಯ ಹೆದ್ದಾರಿ-275 ಮತ್ತು ಸರ್ವೀಸ್ ರಸ್ತೆಗಳಲ್ಲಿ ಪ್ರಯಾಣಿಕರನ್ನು ತಡೆದು ಸುಲಿಗೆ, ದರೋಡೆ ಮಾಡುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿರುತ್ತದೆ.</td></tr>
<tr><td>ಆ)</td><td>ಹಾಗಿದ್ದಲ್ಲಿ, ಪ್ರಯಾಣಿಕರ ಸುರಕ್ಷತೆಗೆ ತೆಗೆದುಕೊಂಡಿರುವ ಕ್ರಮಗಳೇನು; ಇದುವರೆವಿಗೂ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು; ಎಷ್ಟು ಪ್ರಕರಣಗಳನ್ನು ಬೇಧಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)</td><td>ಬೆಂಗಳೂರು-ಮೈಸೂರು ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ದಾಖಲಾದ ಪ್ರಕರಣಗಳ ವಿವರ ಕೆಳಗಿನಂತಿದೆ:-<br><table><tr><th>ಕ್ರಸ</th><th>ಘಟಕ</th><th>ದಾಖಲಾದ ಪ್ರಕರಣಗಳ ಸಂಖ್ಯೆ</th><th>ಬೇಧಿಸಲಾದ ಪ್ರಕರಣಗಳ ಸಂಖ್ಯೆ</th></tr><tr><td>1</td><td>ರಾಮನಗರ</td><td>12</td><td>11</td></tr><tr><td>2</td><td>ಮಂಡ್ಯ</td><td>14</td><td>9</td></tr><tr><td></td><td>ಒಟ್ಟು</td><td>26</td><td>20</td></tr></table></td></tr>
<tr><td>ಇ)</td><td>ಹೆದ್ದಾರಿಯಲ್ಲೇ ಬಾರಿಕೇಡ್‌ಗಳನ್ನು ಇರಿಸಿ, ವಾಹನಗಳನ್ನು ತಡೆದು ತಪಾಸಣೆ ನಡೆಸಲು ಹಾಗೂ ದಂಡ ವಿಧಿಸಲು ಪೋಲೀಸರಿಗೆ ನಿಯಮಗಳಲ್ಲಿ ಅವಕಾಶ ಇದೆಯೇ; (ಆದೇಶ ಪ್ರತಿ ನೀಡುವುದು)</td><td>ಹೆದ್ದಾರಿಯಲ್ಲೇ ಬಾರಿಕೇಡ್‌ಗಳನ್ನು ಇರಿಸಿ, ವಾಹನಗಳನ್ನು ತಡೆದು ತಪಾಸಣೆಯನ್ನು ನಡೆಸುತ್ತಿರುವುದಿಲ್ಲ ಹಾಗೂ ದಂಡವನ್ನು ವಿಧಿಸುತ್ತಿರುವುದಿಲ್ಲ.</td></tr>
<tr><td>ಈ)</td><td>ಕೆಲವು ಪ್ರಕರಣಗಳಲ್ಲಿ ಸೀಟ್ ಬೆಲ್ಟ್ ಧರಿಸಿದ್ದರೂ ಹಾಗೂ ಚಾಲನೆ ಸಂದರ್ಭದಲ್ಲಿ ಮೊಬೈಲ್ ಬಳಸದಿದ್ದರೂ ದಂಡ ವಿಧಿಸಲಾಗುತ್ತಿದೆ ಎನ್ನುವ ಸಾರ್ವಜನಿಕ ಆರೋಪಗಳ ಕುರಿತು ಸರ್ಕಾರದ ಸ್ಪಷ್ಟನೆ ಏನು;</td><td>ITMS (Intelligence Traffic Management System) ಕ್ಯಾಮೆರಾಗಳಿಂದ ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡುವ ವಾಹನ ಚಾಲಕರುಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ, ದಂಡ ಪಾವತಿಸುವ ಬಗ್ಗೆ ಎಸ್.ಎಂ.ಎಸ್ ಸಂದೇಶವನ್ನು ಕಳುಹಿಸಲಾಗುತ್ತಿದೆ. ಸೀಟ್ ಬೆಲ್ಟ್ ಧರಿಸಿದ್ದರೂ ಹಾಗೂ ಚಾಲನೆ ಸಂದರ್ಭದಲ್ಲಿ ಮೊಬೈಲ್ ಬಳಸದಿದ್ದರೂ ದಂಡ ವಿಧಿಸಲಾಗುತ್ತಿರುವ ಬಗ್ಗೆ ಸಂಬಂಧಪಟ್ಟ ವಾಹನ ಚಾಲಕರಿಂದ ಸ್ವೀಕೃತವಾಗುವ ದೂರುಗಳನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಉ)</td><td>ಹೆದ್ದಾರಿಯಲ್ಲಿ ಅಳವಡಿಸಿರುವ ಕ್ಯಾಮೆರಾಗಳ ಒಟ್ಟು ಸಂಖ್ಯೆ ಎಷ್ಟು; ಎಲ್ಲೆಲ್ಲಿ ಅಳವಡಿಸಲಾಗಿದೆ; ಕ್ಯಾಮೆರಾಗಳ ವಿಶೇಷತೆ ಏನು; (ಸಂಪೂರ್ಣ ಮಾಹಿತಿ ನೀಡುವುದು)</td><td>ಈ ಹೆದ್ದಾರಿಯಲ್ಲಿ ಒಟ್ಟು 12 ಸಂಖ್ಯೆಯ ITMS (Intelligence Traffic Management System) ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ. ಕ್ಯಾಮೆರಾಗಳನ್ನು ಅಳವಡಿಸಿರುವ ಸ್ಥಳಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.</td></tr>
</table>

| | | |
|---|---|---|
| | | ಈ ಕ್ಯಾಮೆರಾಗಳಿಂದ ಬೆಂಗಳೂರು - ಮೈಸೂರು ನಡುವಿನ ರಾಷ್ಟೀಯ ಹೆದ್ದಾರಿ 275ರಲ್ಲಿ ಸಂಚರಿಸುವ ವಾಹನ ಸವಾರರು ಸಂಚಾರ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ, ಅಂತಹ ವಾಹನಗಳನ್ನು ಪತ್ತೆ ಹಚ್ಚಿ, ಸ್ವಯಂ ಚಾಲಿತ ಬಾವ ಚಿತ್ರಗಳನ್ನು ತೆಗೆದು ಸದರಿ ವಾಹನಗಳ ನೊಂದಣಿ ಸಂಖ್ಯೆಯನ್ನು ಆಧರಿಸಿ ವಾಹನದ ಮಾಲೀಕರ ಮೊಬೈಲಿಗೆ ಕೂಡಲೇ ಸಂಚಾರ ನಿಯಮ ಉಲ್ಲಂಘನೆ ಪ್ರಕರಣದ ಬಗ್ಗೆ ಮತ್ತು ಸದರಿ ಪ್ರಕರಣಕ್ಕೆ ಪಾವತಿಸಬೇಕಾದ ದಂಡದ ಬಗ್ಗೆ ಕೂಡಲೇ ಎಸ್.ಎಂ.ಎಸ್. ಸಂದೇಶವನ್ನು ರವಾನೆ ವಿಶೇಷತೆಯನ್ನು ಈ ಕ್ಯಾಮೆರಾಗಳು ಒಳಗೊಂಡಿರುತ್ತದೆ. |
| ಊ) | ಬೆಂಗಳೂರು-ಮೈಸೂರು ನಡುವಿನ ರಾಷ್ಟ್ರೀಯ ಹೆದ್ದಾರಿ-275 ರಲ್ಲಿ ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಪೊಲೀಸರು ದಾಖಲಿಸಿರುವ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು; ಈ ಪೈಕಿ ಸೀಟ್ ಬೆಲ್ಟ್ ಧರಿಸದಿರುವುದು, ಅತಿ ವೇಗ, ಲೇನ್ ಉಲ್ಲಂಘನೆ, ಚಾಲನೆ ಸಂದರ್ಭದಲ್ಲಿ ಮೊಬೈಲ್ ಬಳಕೆ ಸೇರಿದಂತೆ ದಾಖಲಿಸಲ್ಪಟ್ಟ ಪ್ರಕರಣಗಳ ಒಟ್ಟು ಸಂಖ್ಯೆ ಎಷ್ಟು ಹಾಗೂ ವಿಧಿಸಲಾದ, ಸಂಗ್ರಹಿಸಲಾದ ಮತ್ತು ಸಂಗ್ರಹಿಸಲು ಬಾಕಿ ಇರುವ ದಂಡದ ಮೊತ್ತ ಎಷ್ಟು? (ವರ್ಷವಾರು ಮಾಹಿತಿ ನೀಡುವುದು) | ಬೆಂಗಳೂರು-ಮೈಸೂರು ನಡುವಿನ ರಾಷ್ಟ್ರೀಯ ಹೆದ್ದಾರಿ-275 ರಲ್ಲಿ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಪೊಲೀಸರು ದಾಖಲಿಸಿರುವ ಒಟ್ಟು ಪ್ರಕರಣಗಳ ಸಂಖ್ಯೆ ಹಾಗೂ ವಿಧಿಸಲಾದ, ಸಂಗ್ರಹಿಸಲಾದ ಮತ್ತು ಸಂಗ್ರಹಿಸಲು ಬಾಕಿ ಇರುವ ದಂಡದ ಮೊತ್ತದ ಮಾಹಿತಿಯನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ. |

ಹೆಚ್‌ಡಿ 622 ಎಸ್‌ಎಸ್‌ಟಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು.

ಅನುಬಂಧ-1

ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ-275 ರಲ್ಲಿ 12 ಸಂಖ್ಯೆಯ ಐಟಿಎಂಎಸ್ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ಘಟಕ | ಒಟ್ಟು ಕ್ಯಾಮರಾಗಳು | ಕ್ಯಾಮರಗಳನ್ನು ಅಳವಡಿಸಿರುವ ಸ್ಥಳ | |
|---|---|---|---|---|
| 1. | ರಾಮನಗರ | 05 | 1. | ಕೇತಗಾನಹಳ್ಳಿ ರಸ್ತೆ, 1ನೇ ಲೋಕೇಷನ್, ಬೆಂಗಳೂರು ಕಡೆಗೆ |
| | | | 2. | ಹುಲ್‌ಥಾರ್ ರಾಜ್ಯ ಅರಣ್ಯ ಹತ್ತಿರ, 2ನೇ ಲೋಕೇಷನ್, ಮೈಸೂರು ಕಡೆಗೆ |
| | | | 3. | ಬಿಳಗುಂಬ, 3ನೇ ಲೋಕೇಷನ್, ಬೆಂಗಳೂರು ಕಡೆಗೆ |
| | | | 4. | ಮುಡಗೇರಿ ಗೇಟ್, 4ನೇ ಲೋಕೇಷನ್, ಮೈಸೂರು ಕಡೆಗೆ |
| | | | 5. | ಶ್ರೀ ಚಾಮುಂಡೇಶ್ವರಿ ಆಸ್ಪತ್ರೆ, 5ನೇ ಲೋಕೇಷನ್ ಬೆಂಗಳೂರು ಕಡೆಗೆ |
| 2. | ಮಂಡ್ಯ | 05 | 6. | ಮಾದನಾಯಕನಹಳ್ಳಿ, 1ನೇ ಲೋಕೇಷನ್ ಬೆಂಗಳೂರು ಕಡೆಗೆ |
| | | | 7. | ಗೆಜ್ಜಲಗೆರೆ ಕೆ.ಎಂ.ಎಫ್, 2ನೇ ಲೋಕೇಷನ್, ಮೈಸೂರು ಕಡೆಗೆ |
| | | | 8. | ಇಂಡುವಾಳು, 3ನೇ ಲೋಕೇಷನ್, ಮೈಸೂರು ಕಡೆಗೆ |
| | | | 9. | ಶ್ರೀನಿವಾಸ ಅಗ್ರಹಾರ (ಕಾಲಿಕೊಪ್ಪಲ್), 4ನೇ ಲೋಕೇಷನ್, ಮೈಸೂರು ಕಡೆಗೆ |
| | | | 10. | ಬ್ರಹ್ಮಪುರ, 5ನೇ ಲೋಕೇಷನ್, ಮೈಸೂರು ಕಡೆಗೆ |
| 3. | ಮೈಸೂರು ನಗರ | 02 | 11. | ಸಿದ್ದಲಿಂಗಪುರ, ಹೆಚ್‌ಪಿ ಪೆಟ್ರೋಲ್ ಬಂಕ್ ಹತ್ತಿರ, 1ನೇ ಲೋಕೇಷನ್, ಬೆಂಗಳೂರು ಕಡೆಗೆ |
| | | | 12. | ಸಿದ್ದಲಿಂಗಪುರ, ಹೆಚ್‌ಪಿ ಪೆಟ್ರೋಲ್ ಬಂಕ್ ಹತ್ತಿರ, 2ನೇ ಲೋಕೇಷನ್, ಮೈಸೂರು ಕಡೆಗೆ |
| | ಒಟ್ಟು | 12 | | |

ಅನುಬಂಧ–2

<u>ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ–275 ನಲ್ಲಿ ಅಳವಡಿಸಲಾದ ಐ.ಟಿ.ಎಂ.ಎಸ್ ಕ್ಯಾಮೆರಗಳ ಮುಖಾಂತರ ದಾಖಲಿಸಿದ ಪ್ರಕರಣಗಳು ಮತ್ತು ದಂಡ ಮೊತ್ತದ ವಿವರ</u>

| Traffic violation cases Booked | | | | Driver on call or holding mobile phone while on driving | Total Fine amount imposed | No. of cases cleared | Fine amount collected Rs. | Pending total No.of cases Rs. | Pending Fine amount to be collected Rs. |
|---|---|---|---|---|---|---|---|---|---|
| Total No. of cases booked | Without seat belt | Over speeding | Lane discipline violation | | | | | | |
| 4,74,550 | 2,95,413 | 49,584 | 49,652 | 8,598 | 31,57,96,500 | 31,038 | 1,98,79,500 | 4,43,512 | 29,59,17,000 |
| 4,55,458 | 2,12,461 | 1,96,237 | 36,016 | 6,777 | 34,29,65,000 | 27,769 | 1,98,36,500 | 4,27,689 | 32,31,28,500 |
| 4,11,932 | 1,93,437 | 29,006 | 42,670 | 8,430 | 24,83,84,000 | 15,895 | 93,62,500 | 3,96,037 | 23,90,21,500 |